ಮಲಗಿರುತ್ತಾಳೆ. ಅಲ್ಲಿಯೂ ಆಕೆಯ ಮೇಕಪ್ ಆಗಿರುವ ಮುಖವನ್ನು ನೋಡುತ್ತಾ, ಹೀರೊ ಪಂಕಜ್‌ಕುಮಾರ್ ಒಂದಷ್ಟು ಡೈಲಾಗನ್ನು ಹೇಳಿ, ಅಳುತ್ತಾ, ಆಕೆಯ ಚಿತೆಗೆ ಬೆಂಕಿಯನ್ನು ಇಡುತ್ತಾನೆ.

ತಕರಾರು ಶುರುವಾಗಿದ್ದು ಇಲ್ಲಿಯೇ. ತನ್ನ ಮಗಳು ಸುಕನ್ಯಾ ಚಿತೆಯ ಮೇಲೆ ಮಲಗುವುದಿಲ್ಲ. ಆಕೆಗದು ಅಪಶಕುನವಾಗುತ್ತದೆ. ಅವರ ಮನೆಯ ಗುರುಗಳಾದ ಸುಖಾನಂದರು ಇದಕ್ಕೆ ಅನುಮತಿ ನೀಡಿಲ್ಲ, ಬೇಕಾದರೆ ಯಾರಾದರೂ ಡ್ಯೂಪ್ ಅನ್ನು ಬಳಸಿ ಮಾಡಿಕೊಳ್ಳಿ ಎಂದು ಗಂಗಮ್ಮ ಕಡ್ಡಿತುಂಡು ಮಾಡಿದ ಹಾಗೆ ಹೇಳಿಬಿಟ್ಟಿದ್ದರು. ಆದರೆ ಚಿತೆಯ ಮೇಲೆ ಮಲಗಿರುವ ಹಾಗೆ ಹೀರೊಯಿನ್ ಸುಕನ್ಯಾಳ ಒಂದು ಕ್ಲೋಸ್ ಅಪ್ ಬೇಕು, ಹೀರೊ ಆಕೆಯ ಹಣೆಗೆ ಮುತ್ತು ಕೊಡಬೇಕು. ಇದಕ್ಕೇನು ಮಾಡುವುದು ಎಂದರೆ, ಅದೆಲ್ಲಾ ನನಗೆ ಗೊತ್ತಿಲ್ಲ ಎಂದವರೇ, ಗಂಗಮ್ಮ, ನಡಿಯೇ ಹೋಗೋಣ, ಇವತ್ತಿಗೆ ಸಾಕು, ಎಂದು ಮಗಳನ್ನು ಕರೆದುಕೊಂಡು ಹೊರಟೇ ಬಿಡುವ ಧಮಕಿ ಹಾಕಿದರು.

ಲಕ್ಷ್ಮಿ ಗಂಗಮ್ಮನಿಗೆ ಮನಸಾರೆ ಧನ್ಯವಾದ ಹೇಳಿದ್ದಳು. ಆಕೆ ಹಾಗೆ ಮಾಡಿದ್ದಕ್ಕೆ ತಾನೆ, ತನಗೆ ಇಲ್ಲಿ ಚಿತೆಯ ಮೇಲೆ ಮಲಗುವ ಚಾನ್ಸು ಸಿಕ್ಕಿದ್ದು.

ಲಕ್ಷ್ಮಿ ಎಳೆಯ ವಯಸ್ಸಿನಲ್ಲಿ ಗ್ರೂಪ್ ಡಾನ್ಸ್‌ನಲ್ಲಿ ಒಬ್ಬಳಾಗಿ ಡಾನ್ಸ್ ಮಾಡುತ್ತಿದ್ದಳು. ತೆಳ್ಳಗೆ ಬೆಳ್ಳಗೆ ಸುಂದರವಾಗಿದ್ದ ಹುಡುಗಿ. ಅವಳನ್ನು ಗುರುತಿಸಿದ ನೃತ್ಯ ನಿರ್ದೇಶಕರ ಸಹಾಯಕರು ಆಕೆಯನ್ನು ಡಾನ್ಸಿನಲ್ಲಿ ಹೀರೊಯಿನ್ ಅಕ್ಕಪಕ್ಕ ಇರಿಸುತ್ತಿದ್ದರು. ಕೆಲವೊಮ್ಮೆ ಹೀರೊಯಿನ್ ಇದಕ್ಕೆ ಆಕ್ಷೇಪವೆತ್ತಿದ್ದೂ ಉಂಟು. ಅಷ್ಟು ಸುಂದರವಾಗಿದ್ದಳು ಲಕ್ಷ್ಮಿ.

ಲಕ್ಷ್ಮಿ ಹುಟ್ಟಿ ಬೆಳೆದದ್ದು ನಗರದ ಒಂದು ಕೊಳೆಗೇರಿಯಲ್ಲಿ, ಪೌರಕಾರ್ಮಿಕ ದಂಪತಿಯ ಮಗಳಾಗಿ. ಹೆಚ್ಚು ಕಲಿಯಲಿಲ್ಲ. ಆದರೆ ಅದೇ ಸ್ಲಮ್ಮಿನಲ್ಲಿ ವಾಸಿಸುತ್ತಿದ್ದ, ಸಿನಿಮಾಗಳಲ್ಲಿ ಎಕ್ಸ್‌ಟ್ರಾಗಳಾಗಿ ಭಾಗವಹಿಸಿ ಹೊಟ್ಟೆಹೊರೆಯುತ್ತಿದ್ದ ಇತರ ಗಂಡಸರು, ಹೆಂಗಸರ ನೆರವಿನಿಂದ ಲಕ್ಷ್ಮಿಗೂ ಒಮ್ಮೆ ಹೀರೊ ಕಾರು ಒರೆಸುವ ಹುಡುಗಿಯ ಪಾತ್ರ ಸಿಕ್ಕಿತ್ತು. ನಂತರ ಯಾರದೋ ಸಹಾಯದಿಂದ ಹತ್ತಿರದ ಸಿನಿಮಾ ಡಾನ್ಸ್ ಸ್ಕೂಲಿನಲ್ಲಿ ಅಷ್ಟು ಇಷ್ಟು ಡಾನ್ಸ್ ಕಲಿತಿದ್ದಳು. ಆ ಶಾಲೆಯ ಮಾಸ್ಟರ್ ಸಹಾಯದಿಂದಲೇ ಆಕೆಗೆ ಗ್ರೂಪ್ ಡಾನ್ಸ್‌ನಲ್ಲಿ ಚಾನ್ಸ್ ಸಿಕ್ಕಿದ್ದು.

ಯಾವುದೋ ಕಾಯಿಲೆಗೆ ತುತ್ತಾಗಿ ಆಕೆಯ ಅಪ್ಪ ಮತ್ತು ಅಮ್ಮ ಸತ್ತು ಹೋದ ನಂತರ ಲಕ್ಷ್ಮಿ ಅನಾಥೆಯಾದಳು, ದಾರ ಹರಿದ ಗಾಳಿಪಟವಾದಳು. ಆಕೆಗೆ ಗೊತ್ತಿದ್ದ ಗಂಡಸರು ಆಕೆಯನ್ನು ಬಳಸಿಕೊಳ್ಳತೊಡಗಿದರು. ಸಿನಿಮಾ ಶೂಟಿಂಗಿನಲ್ಲಿ ಅಷ್ಟಿಷ್ಟು ಕಾಣಿಸಿಕೊಂಡು ಹೊಟ್ಟೆಹೊರೆಯುವುದಷ್ಟೆ ಲಕ್ಷ್ಮಿಗೆ ಗೊತ್ತಿದ್ದದ್ದು. ಡಾನ್ಸ್ ಡೈರೆಕ್ಟರುಗಳು, ಅವರ ಅಸಿಸ್ಟಂಟ್‌ಗಳು, ಬರಬರುತ್ತಾ ಅವರ ಅಸಿಸ್ಟೆಂಟ್‌ಗಳು ಲಕ್ಷ್ಮಿಯ ಮೇಲೆ ಉಪಕಾರ ಮಾಡತೊಡಗುವ ಹೊತ್ತಿಗೆ ಲಕ್ಷ್ಮಿ ಸೋತು ಸುಣ್ಣವಾಗಿದ್ದಳು.

ಅದೇನೋ ಗಳಿಗೆ ಕೂಡಿ ಬಂದು ಒಬ್ಬ ಪ್ರಸಿದ್ಧ ಡಾನ್ಸ್ ಡೈರೆಕ್ಟರರ ಅಸಿಸ್ಟಂಟ್ ಈಕೆಯನ್ನು ಪ್ರೀತಿಸಿ ಈಕೆ ವಾಸವಿದ್ದ ಸ್ಲಮ್‌ನಲ್ಲಿದ್ದ ದೇವಸ್ಥಾನದಲ್ಲಿಯೇ ಸರಳವಾಗಿ ಮದುವೆ ಮಾಡಿಕೊಂಡು, ಈಕೆಯ ಮನೆಯಲ್ಲಿಯೇ ಠಿಕಾಣಿ ಹೂಡಿದ್ದ. ಇವರಿಬ್ಬರ ಪ್ರೇಮದ ಫಲವಾಗಿ ಲಕ್ಷ್ಮಿ ಗರ್ಭಿಣಿಯಾದಾಗ ಆಕೆಯ ಗಂಡ, ಮುಂಬಯಿಯ ಒಬ್ಬ ಡಾನ್ಸ್ ಡೈರೆಕ್ಟರ್ ಜೊತೆ ಕೆಲಸ ಮಾಡುವ ಚಾನ್ಸ್ ಸಿಕ್ಕಿದೆ ಎಂದು ಹೇಳಿ ಹೋಗಿದ್ದವನು ಮತ್ತೆ ಬಂದಿರಲೇ ಇಲ್ಲ. ಯಾರೋ ಯಾವಾಗಲೋ ಸಿಕ್ಕು ಕೇಳಿದ್ದಾಗ, ಆಕೆ ಹೊತ್ತಿರುವ ಮಗು ತನ್ನದಲ್ಲ ಎಂದು ಹೇಳಿದ್ದನಂತೆ.

ಅಂತೂ ಈ ಎಲ್ಲದರ ನಡುವೆ ಧೂಳಿಪಟವಾಗಿತ್ತು ಮುಗ್ಧ ಸುಂದರಿ ಲಕ್ಷ್ಮಿಯ ಬದುಕು.